# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಎಂವೈಎಸ್/2695/2021
ಮಂಡನಾಧಿಕಾರಿಗಳ ಶಾಖೆ, ಎಆರ್‌ಇ-18

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 06/04/2022

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12 (3) ರನ್ವಯ ಶಿಫಾರಸ್ಸು ವರದಿ

ವಿಷಯ: ಶ್ರೀ ಸುಮಂತ್ ಜಿ.ಎಸ್ ಬಿನ್ ಶಂಕರಪ್ಪ, ಹಿರಿಯ ಆರೋಗ್ಯ ನಿರೀಕ್ಷಕರು, ವಿಜಯನಗರ 4ನೇ ಹಂತ, ರಿಂಗ್ ರೋಡ್ ಬಳಿ, ಮೈಸೂರು ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

*****

1. ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು, ಭ್ರಷ್ಟಾಚಾರ ನಿಗ್ರಹ ದಳ ಪೋಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ಸಲ್ಲಿಸಿದ ವರದಿಯಲ್ಲಿ ಶ್ರೀ ಸುಮಂತ್ ಜಿ.ಎಸ್ ಬಿನ್ ಶಂಕರಪ್ಪ, ಹಿರಿಯ ಆರೋಗ್ಯ ನಿರೀಕ್ಷಕರು, ವಿಜಯನಗರ 4ನೇ ಹಂತ, ರಿಂಗ್ ರೋಡ್ ಬಳಿ, ಮೈಸೂರು (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದೂರುದಾರರಾದ ಶ್ರೀ ಸಂತೋಷ ಕುಮಾರ್ ಬಿನ್ ಮಂಜುನಾಥ ಆಚಾರ್ಯ, ಮಂಗೂರು ಮನೆ, ಕಡೇಶ್ವಾಲಿ ಗ್ರಾಮ, ಬಂಟ್ವಾಳ ತಾಲ್ಲೂಕು, ದ.ಕ. ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಭೇಟಿ ಮಾಡಿದಾಗ ದೂರುದಾರರ ಕೆಲಸ ಮಾಡಿಕೊಡಲು ಲಂಚದ ಹಣ ಕೇಳಿ ಪಡೆದುಕೊಂಡು ದುರ್ನಡತೆ ತೋರಿಸಿರುತ್ತಾರೆ ಎಂದು ವರದಿ ಸಲ್ಲಿಸಿದ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7 (2) ರನ್ವಯ ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ಸಾರಾಂಶ:–** ದೂರುದಾರರು ಚಿನ್ನಾಭರಣ ಮಾಡುವ ಕೆಲಸ ಮಾಡುತ್ತಿದ್ದು ಅವರಿಗೆ ಚಿನ್ನದ ಕೆಲಸದ ಆಚಾರಿ ಬರದೇ ಇರುವುದರಿಂದ ಅವರು ಬೇರೆ ವ್ಯವಹಾರ ಮಾಡಬೇಕೆಂದು ತನ್ನ ಸ್ನೇಹಿತರು ಮತ್ತು ಚಿಗುರು ಗೆಳೆಯರ ಬಳಗದ ಸಂಚಾಲಕರಾದ ರತ್ನಾಕರ ಪ್ರಭುರವರಲ್ಲಿ ಚರ್ಚಿಸಿದಾಗ ಅವರು ತಾವು ಮಾಡುತ್ತಿರುವ ಫಾಸ್ಟ್ ಫುಡ್ ವ್ಯವಹಾರ ಮಾಡುತ್ತೀರಾ ಎಂದು ಕೇಳಿದಾಗ ದೂರುದಾರರು ಒಪ್ಪಿಕೊಂಡಿರುತ್ತಾರೆ. ಆಗ ರತ್ನಾಕರ ಪ್ರಭುರವರು ಅವರಿಗೆ ಲೈಸನ್ಸ್ ಮಾಡಿಸಬೇಕು, ಅದನ್ನು ಮಾಡಿಕೊಡುವ ಅಧಿಕಾರಿಯ ಪರಿಚಯ ಇದೆ, ಬೇಕಿದ್ದರೆ ಅಲ್ಲಿ ಹೋಗಿ ಆರೋಗ್ಯ ಇಲಾಖೆಯ ಅಧಿಕಾರಿಯನ್ನು ಪರಿಚಯ ಮಾಡಿಸಿ ಲೈಸನ್ಸ್ ಮಾಡಿಸಿಕೊಡುತ್ತೇನೆ ಎಂದು ಹೇಳಿದಾಗ ದೂರುದಾರರು ಅವರೊಂದಿಗೆ ದಿನಾಂಕ: 21/12/2017 ರಂದು ಪುತ್ತೂರಿನ ಸರ್ಕಾರಿ ಆಸ್ಪತ್ರೆಯ ಬಳಿ ಇರುವ ತಾಲ್ಲೂಕು ಆರೋಗ್ಯಾಧಿಕಾರಿಗಳ ಕಛೇರಿಗೆ ಹೋದಾಗ ರತ್ನಾಕರ್‌ರವರ ಪರಿಚಯದ ಅಧಿಕಾರಿಯಾದ ಎದುರುದಾರರು ಕಛೇರಿಯಲ್ಲಿ ಇದ್ದುದನ್ನು ನೋಡಿ ಪರಿಚಯ ಮಾಡಿಕೊಟ್ಟು ದೂರುದಾರರ ಚಾಟ್ಸ್ ಸೆಂಟರ್ಸ್ ತೆರೆಯಲು ಅನುಮತಿ ಕೋರಿ ಬರೆದಿದ್ದ ಅರ್ಜಿಯನ್ನು ನೀಡಿ ಮಾತನಾಡಿಸಿದಾಗ ಎದುರುದಾರರು ರತ್ನಾಕರ್ ಪ್ರಭುರವರಿಗೆ ಎಲ್ಲಾ ಹೇಳಿದ್ದೀರಾ ಎಂದು ಕೇಳಿದಾಗ ಅವರು ಎಲ್ಲಾ ಹೇಳಿದ್ದೇನೆ, ಒಟ್ಟು 3,000/– ರೂ. ಹೇಳಿದ್ದೇನೆ, ಇವರು ನಮ್ಮವರೇ, ಸ್ವಲ್ಪ ಅಡ್ಜೆಸ್ಟ್‌ಮೆಂಟ್ ಮಾಡಿ ಎಂದು ಕೇಳಿರುತ್ತಾರೆ. ಆಗ ಎದುರುದಾರರು ಚರ್ಚೆ ಮಾಡಿ ಕೊನೆಗೆ ಚಾಟ್ಸ್ ಸೆಂಟರ್ ತೆರೆಯಲು ಅನುಮತಿ ಪತ್ರ ನೀಡಲು ರೂ. 2,500/– ಕೊಡಿ ಎಂದು ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ ಮತ್ತು ದೂರುದಾರರಿಗೆ ಅರ್ಜೆಂಟಾಗಿ ಲೈಸನ್ಸ್ ಬೇಕಿರುವುದರಿಂದ ಅಷ್ಟು ಕೊಡಬೇಕು, ಲೇಟ್ ಮಾಡುವುದೆಂದಾದರೆ ಕಡಿಮೆ ಮಾಡಬಹುದಿತ್ತು ಎಂದು ಹೇಳಿ ಲೈಸನ್ಸ್‌ಗಾಗಿ ಹಣ ತುಂಬಬೇಕು ಎಂದು ಹೇಳಿ ಒಂದು ಚಲನ್‌ಗೆ ದೂರುದಾರರ ಸಹಿಯನ್ನು ಹಾಕಿಸಿಕೊಂಡಿರುತ್ತಾರೆ. "ನೀವು ನಾಳೆ ಅಮೌಂಟ್ ಕೊಡಿ, ನಾನು ಉಳಿದೆಲ್ಲವನ್ನೂ ಮಾಡಿಸುತ್ತೇನೆ" ಎಂದು ಹೇಳಿರುತ್ತಾರೆ. ಫೀಸ್

ಎಷ್ಟು ಆಗಬಹುದು ಎಂದು ಕೇಳಿದಾಗ ಸಣ್ಣ ವ್ಯಾಪಾರ ಮಾಡುವವರು ಎಂದು ತೋರಿಸಿ 100/- ರೂ.ಗೆ ಮಾಡಿಕೊಡೋಣ ಎಂದು ಹೇಳಿ ಕಳುಹಿಸಿರುತ್ತಾರೆ. ಈ ಎಲ್ಲಾ ಸಂಭಾಷಣೆಗಳು ನಡೆಯುವಾಗ ರತ್ನಾಕರ್‌ರವರ ಮೊಬೈಲ್‌ನ ವಿಡಿಯೋದಲ್ಲಿ ಧ್ವನಿ ಮುದ್ರಣ ಆಗಿರುತ್ತದೆ.

3. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೇ ಇದ್ದುದರಿಂದ, ದಿನಾಂಕ 22/12/2017 ರಂದು ಬೆಳಿಗ್ಗೆ 9-30 ಘಂಟೆಗೆ ಭ್ರಷ್ಟಾಚಾರ ನಿಗ್ರಹ ದಳ ದಕ್ಷಿಣ ಕನ್ನಡ ಜಿಲ್ಲೆ ಪೊಲೀಸ್ ಠಾಣೆಗೆ ಹಾಜರಾಗಿ ತನಿಖಾಧಿಕಾರಿಯ ಮುಂದೆ ದೂರು ನೀಡಿದಾಗ ಸದರಿ ಪೊಲೀಸ್ ಠಾಣೆಯಲ್ಲಿ ಮೊ. ಸಂ. 12/2017 ಪಿ.ಸಿ. ಕಾಯಿದೆ ಕಲಂ 7 ರಡಿ ಎದುರುದಾರರ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

4. ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ ಶ್ರೀ ಸುಜಿತ್ ತಂದೆ ದಿ. ಗೋಪಾಲ ಮತ್ತು ಶ್ರೀ ರಾಜ್‌ಕುಮಾರ್ ತಂದೆ ದಿ. ಗೋಪಾಲ ಇವರನ್ನು ಬರಮಾಡಿಕೊಂಡಿದ್ದು, ಅವರುಗಳ ಪರಿಚಯ ಮಾಡಿಕೊಂಡು ದೂರುದಾರರಿಗೆ ಪರಿಚಯ ಮಾಡಿಸಿ ಪ್ರಥಮ ವರ್ತಮಾನ ವರದಿಯ ಪ್ರತಿಯನ್ನು ಪಂಚರುಗಳಿಗೆ ನೀಡಿ ಅದರಲ್ಲಿರುವ ವಿಷಯವನ್ನು ಓದಿ ತಿಳಿದುಕೊಳ್ಳಲು ಸೂಚಿಸಿರುತ್ತಾರೆ. ದೂರುದಾರರು ಮತ್ತು ಅವರ ಗೆಳೆಯ ರತ್ನಾಕರ ಪ್ರಬುರವರು ದಿ: 21/12/2017 ರಂದು ಎದುರುದಾರರನ್ನು ಅವರ ಕಛೇರಿಯಲ್ಲಿ ಭೇಟಿಯಾಗಿ ತಮ್ಮ ಕೆಲಸ ಮಾಡಿಕೊಡುವ ಬಗ್ಗೆ ಮಾತನಾಡಿಸಿ, ರತ್ನಾಕರ ಪ್ರಭುರವರ ಮೊಬೈಲ್‌ನ ವಿಡಿಯೋದಲ್ಲಿ ರೆಕಾರ್ಡ್ ಆದ ಸಂಭಾಷಣೆಯಲ್ಲಿ ಎದುರುದಾರರು ದೂರುದಾರರ ಕೆಲಸ ಮಾಡಿಸಿಕೊಡಲು ರೂ. 2,500/- ಗಳಿಗೆ ಬೇಡಿಕೆ ಒಡ್ಡಿದ್ದು ಅದು ಈ ಮೊಬೈಲ್‌ನಲ್ಲಿ ರೆಕಾರ್ಡ್ ಆಗಿರುವುದನ್ನು ನಾನು ಹಾಜರುಪಡಿಸುತ್ತೇನೆ ಎಂದು ಹೇಳಿ ಹಾಜರುಪಡಿಸಿದಾಗ ಆ ಸಂಭಾಷಣೆಯನ್ನು ತನಿಖಾಧಿಕಾರಿಯವರು ಪಂಚರಿಗೆ ಕೇಳಿಸಿ ಮೊಬೈಲ್‌ನಿಂದ ಲ್ಯಾಪ್ ಟಾಪ್‌ಗೆ ಅಳವಡಿಸಿ ಒಂದು ಸಿ.ಡಿ.ಗೆ ವರ್ಗಾಯಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರ

ಸೂಚನೆ ಮೇರೆಗೆ ದೂರುದಾರರು ಎದುರುದಾರರಿಗೆ ಲಂಚವಾಗಿ ಕೊಡಬೇಕಾಗಿರುವ (ರೂ. 2000/- ಮುಖ ಬೆಲೆಯ 1 ನೋಟು ಮತ್ತು 500/- ರೂ. ಮುಖಬೆಲೆಯ 1 ನೋಟು) ಒಟ್ಟು ರೂ.2,500/- ಗಳನ್ನು ತನಿಖಾಧಿಕಾರಿಯವರ ಟೇಬಲ್ ಮೇಲೆ ಹಾಜರುಪಡಿಸಿದಾಗ ಪಂಚರು ನೋಟಿನ ಮೌಲ್ಯ ಮತ್ತು ಕ್ರಮ ಸಂಖ್ಯೆಯನ್ನು ಬಿಳಿ ಹಾಳೆಯಲ್ಲಿ ನಮೂದಿಸಿಕೊಂಡಿರುತ್ತಾರೆ. ನಂತರ ಪೊಲೀಸ್ ಸಿಬ್ಬಂಧಿ ಸದರಿ ನೋಟುಗಳಿಗೆ ಪಿನಾಪ್ತಲಿನ್ ಪೌಡರನ್ನು ಸವರಿದ್ದು, ತನಿಖಾಧಿಕಾರಿಗಳ ಸೂಚನೆಯಂತೆ ಪಂಚ ಸಾಕ್ಷಿ-2 ರಾಜಕುಮಾರ ರವರು ದೂರುದಾರರು ಹಾಜರುಪಡಿಸಿದ್ದ ಪಿನಾಪ್ತಲಿನ್ ಪೌಡರ್ ಸವರಿದ್ದ ನೋಟುಗಳನ್ನು ತಮ್ಮ ಬಲಗೈಯಿಂದ ತೆಗೆದುಕೊಂಡು ಎರಡೂ ಕೈಗಳಿಂದ ಎಣಿಸಿ ತನಿಖಾಧಿಕಾರಿಯವರ ಟೇಬಲ್ ಮೇಲೆ ಇಟ್ಟಿರುತ್ತಾರೆ. ನಂತರ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತನ್ನ ಎರಡೂ ಕೈಗಳ ಬೆರಳುಗಳನ್ನು ಅದ್ದಿ ತೊಳೆದುಕೊಂಡಾಗ ದ್ರಾವಣವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ತನಿಖಾಧಿಕಾರಿಯವರ ಸೂಚನೆಯ ಮೇರೆಗೆ ಪಂಚ-2 ರವರು ದೂರುದಾರರ ಅಂಗಶೋಧನೆ ಮಾಡಿ ಪಿನಾಪ್ತಲಿನ್ ಪುಡಿ ಸವರಿದ 2,500/- ರೂ.ಗಳನ್ನು ದೂರುದಾರರು ಧರಿಸಿದ್ದ ಶರ್ಟಿನ ಎಡ ಮೇಲ್ಭಾಗದ ಜೇಬಿನಲ್ಲಿ ಇಟ್ಟಿರುತ್ತಾರೆ. ದೂರುದಾರರು ಎದುರುದಾರರ ಕಛೇರಿಗೆ ಹೋಗಿ ಅವರನ್ನು ಮಾತನಾಡಿಸಿ ಅವರಲ್ಲಿ ಸೆಂಟರ್ ತೆರೆಯಲು ಅನುಮತಿ ಪತ್ರ ನೀಡುವಂತೆ ಹೇಳಿದಾಗ ಅವರು ಹಣವನ್ನು ನೀಡುವಂತೆ ಕೇಳಿದಾಗ ಲಂಚವಾಗಿ ಕೊಡಬೇಕಾಗಿದ್ದ ಹಣವನ್ನು ಅವರಿಗೆ ಕೊಟ್ಟು ಎದುರುದಾರರು ಹಣವನ್ನು ಸ್ವೀಕರಿಸಿದರೆ ಹೊರಗಡೆ ಬಂದು ತಲೆಯನ್ನು ಕೈಯಿಂದ ಸವರುವ ಮೂಲಕ ಸಂಜ್ಞೆಯನ್ನು ಮಾಡುವಂತೆ ಅಥವಾ ಒಳಗಡೆಯಿಂದ ತನಿಖಾಧಿಕಾರಿಯವರ ಮೊಬೈಲಿಗೆ ಮಿಸ್ ಕಾಲ್ ನೀಡುವಂತೆ ಸೂಚನೆಯನ್ನು ನೀಡಿ ಮಾತುಕತೆಯನ್ನು ದಾಖಲಿಸಕೊಳ್ಳಲು ವಾಯ್ಸ್ ರೆಕಾರ್ಡರನ್ನು ನೀಡಿರುತ್ತಾರೆ. ಪಂಚ ಸಾಕ್ಷಿ-1 ಸುಜೀತ ರವರಿಗೆ ದೂರುದಾರರ ಜೊತೆಯಲ್ಲಿ ಹೋಗಿ ದೂರುದಾರ ಮತ್ತು

ಎದುರುದಾರರ ನಡುವೆ ನಡೆಯುವ ಸಂಭಾಷಣೆಯನ್ನು ಕೇಳಿಸಿಕೊಂಡು ಮತ್ತು ವಿದ್ಯಾಮಾನಗಳನ್ನು ಗಮನಿಸಿ ನಂತರ ವರದಿ ಮಾಡಬೇಕೆಂದು ಸೂಚನೆ ನೀಡಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೋಟೋಗಳನ್ನು ತೆಗೆಸಿ ದಿ: 22/12/2017 ರಂದು ಬೆಳಿಗ್ಗೆ 11-30 ಘಂಟೆಯಿಂದ ಮಧ್ಯಾಹ್ನ 12-15 ಘಂಟೆಯವರೆಗೆ ದಕ್ಷಿಣ ಕನ್ನಡ ಜಿಲೆ ಎಸಿಬಿ ಕಛೇರಿಯಲ್ಲಿ ಕಂಪ್ಯೂಟರ್ ಮೂಲಕ ಗಣಕೀಕರಣ ಮಾಡಿದ ಪ್ರಾಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

5. ದಿನಾಂಕ 22/12/2017 ರಂದು ತನಿಖಾಧಿಕಾರಿಗಳು ಜಪ್ತಿ ಪೂರ್ವದ ಪಂಚನಾಮೆಯ ಎಲ್ಲ ಔಚಿತ್ಯಪೂರ್ವ ನಡವಳಿಕೆಗಳನ್ನು ನಡೆಸಿದ ನಂತರ ದೂರುದಾರರು, ದೂರುದಾರರ ಗೆಳೆಯ ರತ್ನಾಕರ ಪ್ರಭು, ಪಂಚ ಸಾಕ್ಷಿಗಳು ಹಾಗೂ ಸಿಬ್ಬಂಧಿಯವರೊಂದಿಗೆ ಹೊರಟು ಪುತ್ತೂರು ತಾಲ್ಲೂಕು ಆರೋಗ್ಯಾಧಿಕಾರಿಗಳ ಕಛೇರಿ ಬಳಿಗೆ ಮದ್ಯಾಹ್ನ 1-50 ಘಂಟೆಗೆ ಬಂದು ತಲುಪಿದಾಗ ತನಿಖಾಧಿಕಾರಿಗಳು ದೂರುದಾರರಿಗೆ, ದೂರುದಾರರ ಗೆಳೆಯ ಹಾಗೂ ಪಂಚ ಸಾಕ್ಷಿ ಸುಜೀತರವರಿಗೆ ವಹಿಸುವಿಕೆ ಪಂಚನಾಮೆಯಲ್ಲಿ ಕೊಟ್ಟ ಸೂಚನೆಗಳನ್ನು ಪಾಲಿಸುವಂತೆ ತಿಳಿಸಿ ಎದುರುದಾರರನ್ನು ಮಾತನಾಡಿಸಲು ಹೋಗುವಾಗ ವಾಯ್ಸ್ ರೆಕಾರ್ಡರನ್ನು ಆನ್ ಮಾಡಿ ಜೇಬಿನಲ್ಲಿ ಇಟ್ಟುಕೊಂಡು ಹೋಗುವಂತೆ ತಿಳಿಸಿ ಕಳುಹಿಸಿಕೊಟ್ಟಿರುತ್ತಾರೆ. ಅವರುಗಳು ಎದುರುದಾರರ ಕಛೇರಿಗೆ ಬಂದಾಗ ದೂರುದಾರರು ಮತ್ತು ದೂರುದಾರರ ಸ್ನೇಹಿತರವರು ಕಛೇರಿಯ ಒಳಗಡೆ ಹೋಗಿದ್ದು ಪಂಚ ಸಾಕ್ಷಿ-1 ರವರು ಸ್ವಲ್ಪ ಹೊತ್ತು ಹೊರಗೆ ನಿಂತಿದ್ದು ನಂತರ ಅವರು ಕೂಡ ಒಳಗೆ ಹೋಗಿ ಅಲ್ಲಿದ್ದ ಒಂದು ಛೇರಿನಲ್ಲಿ ಕುಳಿತುಕೊಂಡಿರುತ್ತಾರೆ. ದೂರುದಾರರು ಮತ್ತು ದೂರುದಾರರ ಸ್ನೇಹಿತರವರು ಎದುರುದಾರರೊಂದಿಗೆ ಮಾತನಾಡುತ್ತಿದ್ದಾಗ ಎದುರುದಾರರು ಅಲ್ಲಿಯೇ ಇದ್ದ ಒಬ್ಬರನ್ನು ತೋರಿಸಿ "ಇವರು ರಮೇಶ ಅಂತ ಇವರತ್ರ ಕೊಡಿ, ನನ್ನ ವ್ಯವಹಾರವೆಲ್ಲ ಇವರೇ ನೋಡಿಕೊಳ್ಳೋದು" ಎಂದು ಹೇಳಿದಾಗ ದೂರುದಾರರು

ಪಿನಾಪ್ತಲಿನ್ ಪುಡಿ ಲೇಪಿತ ಲಂಚದ ಹಣವನ್ನು ರಮೇಶರವರಿಗೆ ನೀಡಿದಾಗ ಅವರು ಅದನ್ನು ತಮ್ಮ ಬಲಗೈನಿಂದ ಪಡೆದುಕೊಂಡಿರುತ್ತಾರೆ. ಆಗ ರತ್ನಾಕರ ಪ್ರಭುರವರು ಬದಿಗೆ ಹೋಗಿ ತನಿಖಾಧಿಕಾರಿಯವರ ಮೊಬೈಲಿಗೆ ಫೋನ್ ಮಾಡಿ ತಿಳಿಸಿರುತ್ತಾರೆ. ತನಿಖಾಧಿಕಾರಿಯವರು ಅಲ್ಲಿಗೆ ಬಂದು ಎದುರುದಾರರಿಗೆ ತನ್ನ ಪರಿಚಯ ಮಾಡಿಸಿ ಎದುರುದಾರರನ್ನು ಹಾಗೂ ರಮೇಶರವರನ್ನು ದಸ್ತಗಿರಿ ಮಾಡಿರುತ್ತಾರೆ. ನಂತರ ತನಿಖಾಧಿಕಾರಿಗಳು ರಮೇಶರವರಿಗೆ ನಿಮ್ಮ ಬಲಗೈನಲ್ಲಿ ಏನು ಮುಚ್ಚಿಟ್ಟುಕೊಂಡಿದ್ದೀರಿ ಎಂದು ಕೇಳಿದಾಗ ಅವರು ದೂರುದಾರರಿಂದ ಪಡೆದುಕೊಂಡ ಲಂಚದ ಹಣ ಎಂದು ಹೇಳಿದಾಗ ತನಿಖಾಧಿಕಾರಿಗಳು ಅದನ್ನು ಹಾಜರುಪಡಿಸಲು ತಿಳಿಸಿದಾಗ ಅವರು ಹಾಜರುಪಡಿಸಿರುತ್ತಾರೆ. ತನಿಖಾಧಿಕಾರಿಯವರ ಸೂಚನೆ ಮೇರೆಗೆ ಪಂಚಸಾಕ್ಷಿ-2 ರವರು ಸದರಿ ಹಣವನ್ನು ಪಡೆದುಕೊಂಡು ಅವುಗಳ ನಂಬರ್ ಮತ್ತು ನೋಟುಗಳನ್ನು ಈ ಮೊದಲೇ ಬರೆದುಕೊಂಡ ವಿವರಕ್ಕೆ ತಾಳೆ ಮಾಡಿ ನೋಡಿ ಸರಿ ಇರುತ್ತದೆ ಎಂದು ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ರಮೇಶರವರ ಬಲಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ಅದೇ ರೀತಿ ಎಡಗೈ ಬೆರಳುಗಳನ್ನು ಇನ್ನೊಂದು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ತನಿಖಾಧಿಕಾರಿಗಳು ಎದುರುದಾರರಿಗೆ ದೂರುದಾರರಿಂದ ಪಡೆದ ರೂ. 2,500/- ಲಂಚದ ಹಣ ಪಡೆದ ಬಗ್ಗೆ ವಿಚಾರಿಸಿದಾಗ ಎದುರುದಾರರು ತಮ್ಮ ಸಮಜಾಯಿಷಿಯನ್ನು ಒಂದು ಬಿಳಿ ಹಾಳೆಯಲ್ಲಿ ಬರೆದುಕೊಟ್ಟಿದ್ದು ಅದರಲ್ಲಿ "ಶ್ರೀ ಸಂತೋಷಕುಮಾರರವರು ಆಹಾರ ಸುರಕ್ಷತೆ ಮತ್ತು ಗುಣ ಮಟ್ಟ ಕಾಯಿದೆಯಡಿಯಲ್ಲಿ ಆಹಾರ ನೋಂದಣಿಗೆ ಅರ್ಜಿ ಸಲ್ಲಿಸಿದ್ದು ಸದರಿಯವರಿಗೆ ತುರ್ತಾಗಿ ಆಹಾರ ನೋಂದಣಿ ಬೇಕೆಂದು ಪದೇ ಪದೆ ಒತ್ತಡ ಹಾಕುತ್ತಿದ್ದು ದಿ: 22/12/2017 ರಂದು ತಾಲೂಕು ಆರೋಗ್ಯ ಅಧಿಕಾರಿಗಳ ಕಛೇರಿಗೆ ಬಂದು ನನ್ನ

ಸಹಾಯಕರಾದ ರಮೇಶರವರಿಗೆ ಬಲವಂತವಾಗಿ ನೀಡಿರುತ್ತಾರೆ. ಅದೇ ಸಂದರ್ಭದಲ್ಲಿ ಭ್ರಷ್ಟಾಚಾರ ನಿಗ್ರಹದಳದವರಿಗೆ ಮಾಹಿತಿ ಕೊಟ್ಟು ನನ್ನನ್ನು ಹಿಡಿಸಲು ಪ್ರಯತ್ನಿಸಿರುತ್ತಾರೆ" ಎಂದು ಬರೆದುಕೊಟ್ಟ ಸಮಜಾಯಿಷಿ ಮೇಲೆ ಪಂಚರ ಸಹಿ ಪಡೆದು ತನಿಖಾದಿಕಾರಿಗಳು ತಮ್ಮ ವಶಕ್ಕೆ ಪಡೆದಿರುತ್ತಾರೆ. ನಂತರ ತನಿಖಾಧಿಕಾರಿಗಳು ಸಮಜಾಯಿಷಿ ಬಗ್ಗೆ ದೂರುದಾರರನ್ನು ವಿಚಾರಿಸಿದಾಗ ದೂರುದಾರರು ಎದುರುದಾರರು ಸುಳ್ಳು ಸಮಜಾಯಿಷಿ ಬರೆದುಕೊಟ್ಟಿದ್ದಾರೆ ಮತ್ತು ಲಂಚವನ್ನು ಕೇಳಿ ರಮೇಶರವರ ಹತ್ತಿರ ಕೊಡಿಸಿರುತ್ತಾರೆ ಎಂದು ತಿಳಿಸಿರುತ್ತಾರೆ. ಅದೇ ರೀತಿ ಪಂಚ-1 ರವರನ್ನು ವಿಚಾರಿಸಿದಾಗ ಅವರೂ ಸಹ ನೀವು ಸುಳ್ಳು ಸಮಜಾಯಿಷಿ ಬರೆದುಕೊಟ್ಟಿದ್ದಾರೆ ಮತ್ತು ಲಂಚವನ್ನು ಕೇಳಿ ರಮೇಶರವರ ಹತ್ತಿರ ಕೊಡಿಸಿರುತ್ತಾರೆ ಎಂದು ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ರಮೇಶರವರಿಗೆ ಸಮಜಾಯಿಷಿಯನ್ನು ಬರೆದುಕೊಡಲು ತಿಳಿಸಿದಾಗ ಅವರು ತಮ್ಮ ಸಮಜಾಯಿಷಿಯಲ್ಲಿ "ಎದುರುದಾರರು ನನಗೆ ಸರ್ ಬಂದ ಮೇಲೆ ಸರ್ಟಿಫಿಕೇಟಿಗೆ ಸಹಿ ಹಾಕಿಸಿ ಪಾರ್ಟಿಗೆ ಕೊಡಿ ಎಂದು ಹೇಳಿದರು. ಆಗ ಪಾರ್ಟಿಯವರು ಎದುರುದಾರರಿಗೆ ಹಣವನ್ನು ಕೊಡಲು ಹೋದಾಗ ಎದುರುದಾರರು ನನಗೆ ಹಣ ತೆಗೆದುಕೊಳ್ಳಲು ಹೇಳಿದರು, ನಾನು ಹಣ ತೆಗೆದುಕೊಂಡಿರುತ್ತೇನೆ. ಅದು ಯಾವ ಹಣ ಎಂದು ನನಗೆ ಗೊತ್ತಿಲ್ಲ" ಎಂದು ಬರೆದುಕೊಟ್ಟ ಸಮಜಾಯಿಷಿಗೆ ಪಂಚ-1 ರವರನ್ನು ವಿಚಾರಿಸಿದಾಗ ಅವರು ಸಮಜಾಯಿಷಿಯಲ್ಲಿ ಬರೆದುಕೊಟ್ಟ ವಿಷಯ ಸತ್ಯವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ವಾಯ್ಸ್ ರೆಕಾರ್ಡರ್‌ನಲ್ಲಿ ದಾಖಲಾಗಿದ್ದ ಸಂಭಾಷಣೆಯನ್ನು ಪಂಚರಿಗೆ ಕೇಳಿಸಿ ಪಂಚ ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳು, ಎದುರುದಾರರಾದ ನಿಮ್ಮ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

6. ಧ್ವನಿ ವಿಶ್ಲೇಷಣಾ ವರದಿಯಲ್ಲಿ ಮುದ್ರಿತ ಧ್ವನಿಯು ನಿಮ್ಮ ಧ್ವನಿಯೊಂದಿಗೆ ತಾಳೆಯಾಗಿರುವುದು ಧೃಢಪಟ್ಟಿರುತ್ತದೆ ಹಾಗೂ ರಾಸಾಯನಿಕ ತಜ್ಞರ ಪರೀಕ್ಷಾ

ವರದಿಯಲ್ಲಿ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇರುವುದು ಧ್ರಢಪಟ್ಟಿರುತ್ತದೆ.

7. ಎದುರುದಾರರಿಗೆ ದಿನಾಂಕ 23/09/2021 ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿಗಳನ್ನು ಕೇಳಲಾಗಿತ್ತು. ಅವರು ತಮ್ಮ ಸಮಜಾಯಿಷಿಯನ್ನು ದಿನಾಂಕ 14/12/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ ಎದುರುದಾರರು ತಾನು ಯಾವುದೇ ಲಂಚದ ಬೇಡಿಕೆಯನ್ನು ಇಟ್ಟಿರುವುದಿಲ್ಲ ದಿ: 21-12-2017 ರಂದು ದೂರುದಾರರು ಸಂತೋಷ ಫಾಸ್ಟಫುಡ್ ತೆರೆಯಲು ಅರ್ಜಿಯನ್ನು ನೀಡಿದ್ದು, ನೊಂದಣಿ ಶುಲ್ಕವಾದ ರೂ. 100/- ಸಹಿತ ನಾನು ಅಪಲೋಡ್ ಮಾಡಿರುತ್ತೇನೆ ನನ್ನ ಕರ್ತವ್ಯದ ಜವಾಬ್ದಾರಿ ಆ ಸಮಯದಲ್ಲಿ ಆನ್‌ಲೈನ್ ಅರ್ಜಿಯನ್ನು ಅಪಲೋಡ್ ಮಾಡುವುದು, ಸಂಬಧಪಟ್ಟ ದಾಖಲಾತಿಗಳನ್ನು ಸಂಗ್ರಹಿಸುವುದು ನಂತರ ಸದರಿ ನೊಂದಣಿ ಪತ್ರಕ್ಕೆ ಸಹಿ ಹಾಕುವ ಮೇಲಾಧಿಕಾರಿಗಳಿಗೆ ರವಾನಿಸುವುದು. ಸದರಿ ಪ್ರಕ್ರಿಯೆಯನ್ನು ದಿ: 21-12-2017 ರಂದೇ ನಾನು ಮಾಡಿದ್ದು, ನಾನು ಕೆಲಸ ಮಾಡಿದ್ದ ನಂತರ ಕೆಲಸ ಮಾಡಿಕೊಡಲು ಲಂಚ ಸ್ವೀಕರಿಸುವ ಪ್ರಮೇಯ ಬರುವುದಿಲ್ಲ ಸದರಿ ಪ್ರಕರಣದಲ್ಲಿ ಮರುದಿನ ದಿ: 22-12-2017 ರಂದು ದೂರುದಾರರು ರೂ. 2,500/- ಗಳನ್ನು ಡಿ ಗ್ರೂಪ್ ನೌಕರ ರಮೇಶನ ಕೈಯಲ್ಲಿ ನೀಡಿದ್ದು, ರಮೇಶನ ಬಳಿ ಹಣ ಸ್ವೀಕರಿಸುವಂತೆ ನಾನು ಹೇಳಿರುವುದಿಲ್ಲ ಎಂದು ಹೇಳಿ ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಅವರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡು ಬರುವುದಿಲ್ಲ.

**8.** ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಧ್ವನಿ ವಿಶ್ಲೇಷಣಾ ವರದಿ, ರಾಸಾಯನಿಕ ತಜ್ಞರ ಪರೀಕ್ಷಾ ವರದಿ ಮತ್ತು

ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇವುಗಳನ್ನು ಪರಿಶೀಲಿಸಿದಾಗ ದೂರುದಾರರು ಚಾಟ್ಸ್ ಸೆಂಟರ್ ಕರೆಯಲು ಅನುಮತಿಗಾಗಿ ಪುತ್ತೂರು ತಾಲ್ಲೂಕು ಆರೋಗ್ಯಾಧಿಕಾರಿ ಕಛೇರಿಯಲ್ಲಿ ದಿ: 21-12-2017 ರಂದು ಅರ್ಜಿ ಸಲ್ಲಿಸಿದ್ದು, ಅನುಮತಿ ಪತ್ರಕ್ಕೆ ಸಹಿ ಮಾಡಲು ಲಂಚದ ಹಣಕ್ಕೆ ಬೇಡಿಕೆಯಿಟ್ಟು ದಿ:22-12-2017 ರಂದು ರೂ. 2,500/- ಲಂಚವನ್ನು ಕಛೇರಿಯ ಅಂಟೆಡರ್ ರಮೇಶರವರಿಗೆ ಲಂಚದ ಹಣವನ್ನು ತೆಗೆದುಕೊಳ್ಳುವಂತೆ ದುಷ್ಪ್ರೇರಣೆ ಮಾಡಿ ದೂರುದಾರರಿಂದ ಲಂಚದ ಹಣವನ್ನು ಪಡೆದುಕೊಳ್ಳುವಂತೆ ತಿಳಿಸಿದ್ದರಿಂದ ರಮೇಶರವರು ಲಂಚದ ಹಣವನ್ನು ದೂರುದಾರರಿಂದ ಸ್ವೀಕರಿಸಿರುತ್ತಾರೆ. ಹಾಗಾಗಿ ಎದುರುದಾರರು ರಮೇಶರವರ ಮೂಲಕ ದೂರುದಾರರಿಂದ ಲಂಚದ ಹಣವನ್ನು ಪಡೆದು ತಮ್ಮ ಕರ್ತವ್ಯದಲ್ಲಿ ನೀತಿ ನಿಷ್ಠೆಯನ್ನು ಪಾಲಿಸದೇ ಕರ್ತವ್ಯದಲ್ಲಿ ಶ್ರದ್ಧೇ ಹೊಂದಿರದೆ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು 2021) ರ ನಿಯಮ 3 (1) (i) ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

9. ಈ ಮೇಲ್ಕಂಡ ಅಂಶಗಳಿಂದಾಗಿ ಎದುರುದಾರರಾದ ಶ್ರೀ ಸುಮಂತ್ ಜಿ.ಎಸ್ ಬಿನ್ ಶಂಕರಪ್ಪ, ಹಿರಿಯ ಆರೋಗ್ಯ ನಿರೀಕ್ಷಕರು, ವಿಜಯನಗರ 4ನೇ ಹಂತ, ರಿಂಗ್ ರೋಡ್ ಬಳಿ, ಮೈಸೂರು ಇವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (3) ರನ್ವಯ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.

10. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

8/4/22

**(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)**
ಉಪಲೋಕಾಯುಕ್ತರು–1
ಕರ್ನಾಟಕ ರಾಜ್ಯ, ಬೆಂಗಳೂರು.